ಪೊಕ್ಕಾಂ ಮೈಸೂರು, 23ನೇ ಮೇ 1885.

ಕಾಂಪ್ ನಂ. 212.—ಅಡ್ವೋಕೇಟ್ ಮೆ|| ಎಂ. ರಾಮರಾಯರು, ಮೈಸೂರಿಗೆ ವರ್ಗಮಾಡಲ್ಪಟ್ಟು ಮೆ|| ಈ. ಸಿ. ಸುಬ್ಬರಾಯರ್ ಯವರಿಗೆ ಬದಲಾಗಿ ಕಿವವೊಗ್ಗಾ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ಮೆ|| ಸುಬ್ಬರಾಯರ್ ಯವರಿಗೆ ಚಾರ್ಜ್ ವಪ್ಪಿಸುವವರಿಗೆ ಮೆ|| ಎಂ. ರಾಮರಾಯರು ಮೈಸೂರು. ಪಬ್ಲಿಕ್ ಪ್ರಾಸಿಕ್ಯೂಟರಾಗಿ ಕೆಲಸನೋಡತಕ್ಕದ್ದು.

ಕ್ಯಾಂಪ್ ನಂ. 216.—ಸರ್ಜನ್ ಮೇಜರ್ ಜೆ. ಹೆಡರ್ಸನ್ ಎಂ. ಡಿ. ಯವರು 1885ನೇ ಇಸವಿ ಮೇ 19ನೇ ಮಧ್ಯಾನ್ಹಕ್ಕಂ ಮಧ್ಯಾನ್ಹಪ್ಪರ ಮೈಸೂರು ಗವರ್ನಮೆಂಟ್ ಕೀನಿಯರ್ ಸರ್ಜನ್ ಕೆಲಸಗಳ ಚಾರ್ಜನ್ನು ಸರ್ಜನ್-ಮೇಜರ್ ಟಿ. ಜೆ. ಮೆಕ್‌ಗ್ರಾಯವರಿಗೆ ವಪ್ಪಿಸಿರುತ್ತಾರೆ.

ಕ್ಯಾಂಪ್ ನಂ. 217.—ಸರ್ಜನ್-ಮೇಜರ್ ಟಿ. ಜೆ. ಮೆಕ್‌ಗ್ರಾಯವರು 1885ನೇ ಇಸವಿ ಮೇ 20ನೇ ಮಧ್ಯಾನ್ಹಕ್ಕಂ ಮಧ್ಯಾನ್ಹ ತ್ಪೂರ್ವ ಮೈಸೂರು ಸಿವಿಲ್ ಸರ್ಜನ್ ವ ಕೆಮಿಕಲ್ ಯಗ್ಜಾಮಿನರ್ ಕೆಲಸಗಳ ಚಾರ್ಜನ್ನು ಸರ್ಜನ್ ಪಿ. ಹೆಚ್. ಬೆರ್ಸಯವರಿಗೆ ವಪ್ಪಿಸಿರುತ್ತಾರೆ.

ತಾರೀಖು 12ನೇ ಮಾರ್ಚ್ ೧೮೮೩.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಪ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜಿದಾರರು ಶುಕ್ರವಾರಗಳ ದಿನ ಮಧ್ಯಾನ್ಹಪ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಸೆಕ್ರಿಟೇರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಪೆಕ್ಷನ್ ನಾಮೆ.

ನಂ. 2403—480. ತಾರೀಖು 15ನೇ ಮೇ 1885.

ಅಫೀಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಪಿ. ಸೀತಾರಾಮರಾಯರು 1885ನೇ ಇಸವಿ ಮೇ 7ನೇಮಧ್ಯಾನ್ಹಕ್ಕಂ ಮಧ್ಯಾನ್ಹಪ್ಪರ ಕಡೂರು ಡಿವಿಜನ್ ಚಾರ್ಜನ್ನು ಮೆ|| ಸುಬ್ಬರಾಯರ್ ಯವರಿಂದ ವಹಿಸಿ ಇರುತ್ತಾರೆ.

ಜೆ. ಹೆಚ್. ಎಂ. ಕೆರ್‌ಸಿಂಗ್‌ಟನ್, ಕೆಪ್ಟನ್, ಆರ್. ಈ.,
ಮೈಸೂರು ಗವರ್ನಮೆಂಟ್ ಸೆಕ್ರಿಟೇರಿ.
ಪಬ್ಲಿಕ್ ವರ್ಕ್ಸ್ ಇಲಾಖಾ.